ವಿಷಯ :– ಹುಬ್ಬಳ್ಳಿಯಲ್ಲಿರುವ ಕೆ. ಇ. ಬಿ. ಇ. ಇ. ಅವರ ಕಛೇರಿ ಸ್ಥಳಾಂತರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 509 (860)

ಶ್ರೀ ಮಂಜುನಾಥ ಚೆನ್ನಪ್ಪ ಕುನ್ನೂರ (ಶಿಗ್ಗಾಂವಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಹುಬ್ಬಳ್ಳಿಯಲ್ಲಿರುವ ಕೆ. ಇ. ಬಿ. ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರ ಆಫೀಸ್ ಡಿವಿಜನ್-2 ಕಛೇರಿಯನ್ನು ಸವಣೂರ ಸಬ್ ಡಿವಿಜನ್‌ಗೆ ಸ್ಥಳಾಂತರಿಸುವುದು ಸರ್ಕಾರದ ಉದ್ದೇಶವೇನಾದರೂ ಇದೆಯೆ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಸದರೀ ಆಫೀಸನ್ನು ಸ್ಥಳಾಂತರಿಸಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :– ವಿ. ಸಿ. ನಾಲಾ ವಿಭಾಗ ಮಂಡ್ಯ ಇಲ್ಲಿಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 510 (856)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಮುಖ್ಯ ಮಂತ್ರಿಗಳು –ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿ. ಸಿ. ನಾಲಾ ವಿಭಾಗ, ಮಂಡ್ಯ ಇದರ ವ್ಯಾಪ್ತಿಗೆ ಒಳಪಡುವ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣ ಎಷ್ಟು ?

ಆ) ಈ ಅಚ್ಚುಕಟ್ಟು ಪ್ರದೇಶದಲ್ಲಿ ವ್ಯವಸ್ಥಿತವಾಗಿ ನೀರು ಸರಬರಾಜು ಮಾಡಲು ವಾರ್ಷಿಕವಾಗಿ ವೆಚ್ಚವಾಗುತ್ತಿರುವ ಮೊಬಲಗೆಷ್ಟು ?

ಇ) 1989–90 ಹಾಗೂ 1990–91 ನೇ ಸಾಲುಗಳಿಗೆ ಎಷ್ಟು ಮೊತ್ತದ ಅನುದಾನವನ್ನು ಸರ್ಕಾರ ವಿ. ಸಿ. ನಾಲಾ ವಿಭಾಗ ಮಂಡ್ಯ ಇಲ್ಲಿಗೆ ಬಿಡುಗಡೆ ಮಾಡಿದೆ. ?

ಈ) ಅನುದಾನವನ್ನು ಯಾವ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) 2.09.919 ಎಕರೆಗಳು.

ಆ) 1989–90 ನೇ ಸಾಲಿನಲ್ಲಿ 123 ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗಿದೆ.

ಇ) 1989–90 ನೇ ಸಾಲಿನಲ್ಲಿ 123 ಲಕ್ಷ ರೂ. ಗಳು 1990–91 ನೇ ಸಾಲಿಗೆ 104.43 ಲಕ್ಷ ರೂ. ಗಳು. ನೀಡಿರುವ ಅನುದಾನ.

ಈ) 1990–91 ನೇ ಸಾಲಿನಲ್ಲಿ ಸರಾಸರಿ ಹೆಕ್ಟೇರಿಗೆ 160 ರೂ. ಗಳಂತೆ ಹರಿವ ನೀರಾವರಿ ಯೋಜನೆಗಳಿಗೆ ನಿರ್ವಹಣೆಗಾಗಿ ಅನುದಾನ ನೀಡಲಾಗಿದೆ.

ವಿಷಯ :– ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ರೇಷ್ಮೆ ಮಾರುಕಟ್ಟೆಗಳಲ್ಲಿ ಅಳವಡಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 511 (853)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರೇಷ್ಮೆ ಮಾರುಕಟ್ಟೆಗಳ ಸಂಖ್ಯೆ ಎಷ್ಟು ?

ಆ) ಈ ಮಾರುಕಟ್ಟೆಗಳಲ್ಲಿ ರೈತರಿಗೆ ತೂಕದಲ್ಲಿ ವ್ಯತ್ಯಾಸವಾಗದಂತೆ ಎಲೆಕ್ಟ್ರಾನಿಕ್ ತೂಕದ ಮಿಷನ್‌ಗಳನ್ನು ಅಳವಡಿಸಲು ರೈತರು ಒತ್ತಾಯ ಪೂರ್ವಕವಾಗಿ ಆಗ್ರಹ ಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?